he is not going to complete it by the end of August. Is it the way you are treating the S.C and S.T people?

ಶ್ರೀ ಪಿ. ವೆಂಕಟರಮಣ.—ಸ್ವಾಮಿ, ಆದರಲ್ಲಿ ವಿಳಂಬವಾಗಿದೆ ಎನ್ನುತಕ್ಕಂಥಾದ್ದನ್ನು ನಾನು ಒಪ್ಪಿಕೊಳ್ಳುತ್ತಾ ಇದ್ದೇನೆ, ವಿಳಂಬವಾಗಿರುವುದನ್ನು ನಾವು ಹಾಗೆಯೇ ಬಿಡುವುದಕ್ಕೆ ಆಗುವುದಿಲ್ಲ. ಅದನ್ನು ನಾವು ಪೂರೈಸಲೇಬೇಕು, ಅದನ್ನು ಆದಷ್ಟು ಬೇಗ ಪೂರೈಸಿಕೊಂಡುತ್ತೇವೆ ಎಂದು ನಾನು ಹೇಳುತ್ತಿದ್ದೇನೆ.

Absorbtion of work Charged establishment employees of K.P.W.D

33 SRI GOVINDA P. VADEYARAJ (Kamalapur).—Will the Minister for Public Works be pleased to state —

(a) whether it is a fact that the Government have issued orders for the absorption of work charged establishment employees of the K.P.W.D.

(b) if so, the terms and conditions of absorption;

(c) number of Work Charged Establishment employees of the K P.W.D. have so far been absorbed;

(d) of them, number of SCs and STs;

(e) if there is no adequate representation of SCs, STs in the list of work charged establishment employees already absorbed, the steps the Government intend to take to make up the short fall;

(f) whether the Government consider to reduce the period of continuous service of work-charged establishment employees belonging to SC/ST to enable adequate representation of SCs/STs in the absorbed category;

(g) whether the Government would also consider the services of SC/ST employees in NMR/Daily wages/Gang Coolies etc, (not coming under work Charged Estt.) on par with the Work Charged employees to facilitate their absorption, so as to get adequate representation of SCs/STs. in absorbed category of work charged employees?

SRI KAGODU THIMMAPPA (Minister for Public Works).—

(a) Yes.

(b) Members of the Work Charged Establishment appointed prior to 1-7-1978 and who have put in not less than 10 years of continous service (without any break) are eligible for absorption under regular establishment.

(c) 6,443

(d) S.Cs ... 298
S.Ts ... 118

(e) Does not arise.

(f) No.

(g) Does not arise in view of the reply to Clause (i) of the question.

ಶ್ರೀ ಜೆ. ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ಈ ಪಿ.ಡಬ್ಲ್ಯೂ.ಡಿ. ವರ್ಕ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸಮಾಡತಕ್ಕಂಥ ಜನರಿಗೆ ಆಬ್‌ಸಾರ್ಬೆಷನ್ ಮಾಡಿ ರೆಗ್ಯುಲರೈಸ್ ಮಾಡಿದ್ದಾರೆಂದು ತಿಳಿದುಕೊಂಡು ಅವರು ಉತ್ತರ ಕೊಟ್ಟಿದ್ದಾರೆ. ಪಾಸ್ ಮಾಡಿರತಕ್ಕಂಥ ಜನರ ಸಂಖ್ಯೆ ೬೪೪೫. ಈ ಬಗ್ಗೆ ಸರ್ಕಾರಿ ಆಜ್ಞೆಯನ್ನು ಯಾವಾಗ ಮಾಡಿದರು ? ಮತ್ತು ಯಾವ ಆಧಾರದಮೇಲೆ ಮಾಡಿದರು ಎಂದು ಹೇಳಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಆಜ್ಞೆ ಹೊರಟಿರತಕ್ಕಂಥಾದ್ದು ೭-೧೧-೧೯೬೦ ರಲ್ಲಿ. ಆ ನೌಕರರಲ್ಲಿ ಸುಮಾರು ೬೪೫೫ ಜನರನ್ನು ನಾವು ಈಗಾಗಲೇ ಆಬ್‌ಸಾರ್ಬ್ ಮಾಡಿದ್ದೇವೆ. ನಾವು ಈ ಆಜ್ಞೆಯನ್ನು ಹೊರಡಿಸಿರತಕ್ಕಂಥ ಕಾಲದಲ್ಲಿ, ಇಲ್ಲಿ ಉತ್ತರದಲ್ಲಿ ಹೇಳಿರುವಂತೆ ೧-೭-೧೯೭೮ ರಲ್ಲಿ ಯಾರ್ಯಾರು ೧೦ ವರ್ಷದಷ್ಟು ಪೂರ್ಣವಾಗಿ ಕೆಲಸಮಾಡಿದ್ದಾರೆಯೋ ಅಂತಹವರನ್ನು ೫ ವರ್ಷದಲ್ಲಿ ಖಾಯಂಗೊಳಿಸಬೇಕು ಎಂದು ಹೇಳಿದ್ದೇವೆ. ನಾವು ಆಜ್ಞೆಯ ಪ್ರಕಾರ ಮಾಡಿದ್ದೇವೆ.

ಶ್ರೀ ಜಿ. ಪಿ. ಒಡೆಯರಾಜ್.—ಸ್ವಾಮಿ, ಈ ಆಜ್ಞೆಯನ್ನು ಹೊರಡಿಸಿದಮೇಲೆ ಈಗ ೬೪೫೫ ಜನರಲ್ಲಿ ೨೯೮ ಜನ ಎಸ್.ಸಿ. ಪೀಪಲ್ ಇದ್ದಾರೆ. ಎಸ್.ಟಿ. ೧೧೮ ಜನ ಇದ್ದಾರೆ. ಇದನ್ನು ನೋಡಿದರೆ ರಾಜ್ಯಾಂಗಬದ್ಧವಾಗಿ ೧೫ ಪರ್ಸೆಂಟ್ ಮತ್ತು ೩ ಪರ್ಸೆಂಟ್ ಆಗುವುದಿಲ್ಲ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೆ ಬಂದಿದ್ದರೆ ಸರ್ಕಾರದವರು ಏನು ಕ್ರಮ ಕೈಕೊಳ್ಳುತ್ತಾರೆ ?

ಶ್ರೀ ಕಾಗೋಡು ತಿಮ್ಮಪ್ಪ.—ಅದು ಸರ್ಕಾರದ ಗಮನಕ್ಕೆ ಬಂದಿದೆ. ಇದರಲ್ಲಿ ನೇರವಾಗಿ ನೇಮಕ ಮಾಡುವಾಗ ಮತ್ತೆ ಯಾರ್ಯಾರಿಗೆ ಬಡ್ತಿ ಕೊಡಬೇಕೋ ಅಂತಹ ಸನ್ನಿವೇಶದಲ್ಲಿ ನಾವು ರಿಸರ್ವೇಷನ್ ಮಾಡಬೇಕು. ಅಲ್ಲಿ ಹಂಗಾಮಿಯಾಗಿ ಇದ್ದಂತಹ ಕೆಲಸಗಾರರು ಅನೇಕವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಅವರನ್ನು ಆ ಸ್ಥಳದಲ್ಲಿ ಖಾಯಂಗೊಳಿಸತಕ್ಕಥ ತೀರ್ಮಾನದಲ್ಲಿ ಇದು ಅಗಿರತಕ್ಕಂಥಾದ್ದಾಗಿದೆ. ಆ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಗೊಳಿಸತಕ್ಕಂಥ ಸಂದರ್ಭದಲ್ಲಿ ಇವೆಲ್ಲಾ ವಿಷಯುಗಳು ಬಂದಾಗ ಎಸ್.ಸಿ. ಎಸ್.ಟಿ. ಯವರಿಗೆ ಏನೊಂದು ರಿಸರ್ವೇಷನ್ ಮಾಡಬೇಕೋ ಅದನ್ನು ನಾವು ಗಂಭೀರವಾಗಿ ಮಾಡಬೇಕಾಗುತ್ತದೆ. ಈ ಸ್ಪೆಷಲೈಡರಿಯವರ ಪ್ರಶ್ನೆ ಬಂದಾಗ ''ಅವರನ್ನು ಖಾಯಂ ಮಾಡಿರಿ.' ಎಂದು ಹೇಳಿದರು. ಒಂದುಕಡೆ ಹಂಗಾಮಿಯಾಗಿ ಇರುವವರನ್ನು ಖಾಯಂ ಮಾಡಿರಿ ಎಂದು ಹೇಳುವುದು, ಅವರನ್ನು ಖಾಯಂ ಮಾಡಿದಮೇಲೆ ರಿಸರ್ವೇಷನ್ ಮಾಡಿಲ್ಲ ಎಂದು ಹೇಳುವುದು ಇದ್ದೇ ಇದೆ. ಹಾಗೆ ಮಾಡುವಾಗಲೂ ಕೂಡ ನಾವು ಸ್ವಲ್ಪ ವಿಚಾರ ಮಾಡಿ ಮಾಡಬೇಕಾಗಿದೆ. ಇದರಲ್ಲಿ ಹಾಲಿ ಇದ್ದಂತಹವರನ್ನು ಖಾಯಂ ಗೊಳಿಸತಕ್ಕಂಥ ಕಾರಣಕ್ಕಾಗಿ ಇದನ್ನು ನಾವು ನೋಡಲಿಲ್ಲ. ರಿಸರ್ವೇಷನ್ ಮಾಡಬೇಕಾದಂತಹ ಸನ್ನಿವೇಶ ಉಂಟಾಗಲಿಲ್ಲ. ಈ ಎಸ್.ಸಿ. ಎಸ್ ಟಿ. ಯವರೇ. ಹಿಂದುಳಿದವರು ಯಾರ್ಯಾರು ಕೆಲಸದಲ್ಲಿದ್ದಾರೆ ಅವರನ್ನೆಲ್ಲಾ ನಾವು ಆಬ್‌ಸಾರ್ಬ್ ಮಾಡಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ ಕೆಲವು ದಿವಸಗಳ ಹಿಂದೆ ಕೆಲವಾರು ಹುದ್ದೆಗಳನ್ನು ರೆಗ್ಯೂಲರೈಜ್ ಮಾಡಿಕೊಂಡಿದ್ದಾರೆ. ಈ ರೆಗ್ಯೂಲರೈಜ್ ಮಾಡಿಕೊಳ್ಳುವಾಗ ಸರ್ಕಾರದವರು ಹರಿಜನ ಮತ್ತು ಗಿರಿಜನರಿಗೆ ಕೊಡಬೇಕಾದಂತಹ ಪ್ರತಿನಿತ್ಯದ ಬಗ್ಗೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಆದರೆ ಸರ್ಕಾರದವರು ಏನು ಹೇಳಿದ್ದಾರೆಂದರೆ If there is no adequate representation of SCs STs in the list of Work Charged Establishment employees already absorbed, the steps the Government intend to take to make up the shortfall. ? ಮತ್ತೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ does not arise ಎಂದು ಹೇಳಿದ್ದಾರೆ. ಆದ್ದರಿಂದ ಇದು ಸರ್ಕಾರದ ಗಮನಕ್ಕೆ ತೆಗೆದುಕೊಂಡಿಲ್ಲ. ಮತ್ತು ಎರಡನೆಯದಾಗಿ ಇವರ ಯಾವ ಒಂದು ನಿಯಮವನ್ನು ಸಹ ಪಾಲನೆ ಮಾಡಿಲ್ಲ. ಮತ್ತು

ಸರ್ಕಾರದ ಕಾನೂನು ಸಹ ಪಾಲನೆ ಮಾಡಿಲ್ಲ. ಮತ್ತೆ ಮಾನ್ಯ ಮುಖ್ಯ ಮಂತ್ರಿಗಳು ೧೪ ಸಾವಿರ ಸ್ಪೆಷಲಿಸ್ಟರು ಪದವೀಧರರ ಸಮಸ್ಯೆಯನ್ನು ಬಗೆ ಹರಿಸುವಾಗ ಈ ಹರಿಜನ ಮಂತ್ತು ಗಿರಿಜನರಿಗೆ ಯಾವ ರೀತಿಯ ಸೌಲಭ್ಯವನ್ನು ಒದಗಿಸಿ ಕೊಡಬೇಕು ಎನ್ನುವುದರ ಬಗ್ಗೆ ಒಂದು ನಿಲುವನ್ನು ತೆಗೆದುಕೊಂಡಿದ್ದಾರೆಂದು ಗೊತ್ತಾಯಿತು. ಆದ್ದರಿಂದ ಈಗ ಇರುವಂತಹ ೧೮ ಪರ್ಸೆಂಟ್ ಕಡಿಮೆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ. ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಈಗ ಈ ಪ್ರಶ್ನೆ ಉದ್ಭವವಾಗಿರುವುದು ಏನೆಂದರೆ ಅವರಿಗೆ ಈಗ ಹುದ್ದೆಗಳು ಬೇಕು. ಈಗ ನಮ್ಮ ಇಲಾಖೆಯಲ್ಲಿ ಅಗತ್ಯವಾಗಿ ಬೇಕಾಗುವಂತಹ ಹುದ್ದೆಗಳು ಇದರಲ್ಲಿ ಒಂದೂ ಇಲ್ಲ. ಆದರೆ ಏನು ಮಾಡುವುದು, ನಮ್ಮ ತಲೆಯ ಮೇಲೆ ಬಂದು ಕುಳಿತುಕೊಂಡಿದ್ದರಿಂದ ನಮ್ಮ ತಲೆಯ ಮೇಲೆ ಭಾರವನ್ನು ಕಡಿಮೆ ಮಾಡಿಕೊಳ್ಳುವುದಕ್ಕಾಗಿ ಅವರನ್ನು ರೆಗ್ಯುಲರೈಜ್ ಮಾಡಿಕೊಳ್ಳಬೇಕಾಗಿ ಬಂತು. ಆದರೆ ಹಿಂದಿನಿಂದಲೂ ಸಹ ಈ ಹರಿಜನ ಮತ್ತು ಗಿರಿಜನರಿಗೆ ಕೊಡಬೇಕಾಗಿದ್ದಂತಹ ಪ್ರಾತಿನಿಧ್ಯವನ್ನು ಕೊಟ್ಟುಕೊಂಡು ಬಂದಿಲ್ಲ. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಹರಿಜನ ಮಂತ್ತು ಗಿರಿಜನರಿಗೆ ಒದಗಿಸಿಕೊಟ್ಟಿದ್ದೇವೆ. ಆದರೆ ಈಗ ನಮ್ಮ ಇಲಾಖೆಯಲ್ಲಿ ಖಾಲಿಯಾಗಿ ಯಾವುದೇ ಹುದ್ದೆಗಳು ಇಲ್ಲ. ಬೇಕಾದರೆ ಹುದ್ದೆಗಳು ಬೇಕಾದಾಗ ಪರಿಶೀಲನೆ ಮಾಡೋಣ.

SRI C. M. ARUMUGHAM.—The Minister said, the gangmen in work charged establishments are being recruited at the discretion of the Executive Engineer or Superintending Engineer. But when they make recruitment they don't follow the reservation. When you confirm them the Government must pass an order that out of 6,443 gangmen at least there must be 1000 scheduled castes and scheduled tribes. But you don't have 1000 scheduled castes. You have got only 298, which is inadequate. To the question whether the Government intends to make up the shortfall, the Minister has replied, it does not arise. There is no proper representation to scheduled castes, Therefore, will the Government recruit directly in order to make up the shortfall ? You must see that there are one thousand scheduled castes and then you should confirm. Otherwise, whoever is recruited at the discretion of Executive Engineer will be confirmed and ratified by the Government. It is illegal because there is no provision of reservation for scheduled castes. Again the engineers will take their own people, and the Government is sitting judgment over this. I till, you must recruit. The prescribed period of ten years of continuous service should be relaxed to five years for scheduled castes. If it is five years, it should be relaxed to three years. Don't talk of rules and regulations. You must somehow make up wherever there is inadequate representation in these work-charged establishments. while absorbing these work-charged employees. Government is powerful. Kindly take some action.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಈ ವಿಷಯವನ್ನು ಬೇಕಾದಷ್ಟು ಸಾರಿ ಪ್ರಸ್ತಾಪ ಮಾಡಿದ್ದಾರೆ. ಅದು ಏನೆಂದರೆ ನೇರವಾಗಿ ರಿಕ್ರೂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಈ ರೀತಿಯಲ್ಲಿ ನಮ್ಮ ಇಲಾಖೆಯಲ್ಲಿ ಮಾತ್ರವಲ್ಲದೆ ಎಲ್ಲಾ ಇಲಾಖೆಗಳಲ್ಲಿಯೂ ಕೂಡ ಹಂಗಾಮಿಯಾಗಿ ಕೆಲಸಕ್ಕೆ ತೆಗೆದು ಕೊಂಡು ಅವರನ್ನು ಆಲ್ಲಿಯೇ ಖಾಯಂ ಮಾಡಿಕೊಂಡಿದ್ದಾರೆ. ಇದರಲ್ಲಿ ಹರಿಜನ ಮತ್ತು ಗಿರಿಜನರಿಗೆ ಅನ್ಯಾಯವಾಗಿದೆ ಎಂದು ವಿರೋಧಪಕ್ಷದ ಸದಸ್ಯರು ಸಹ ಪ್ರಸ್ತಾಪಮಾಡಿ

ದ್ದಾರೆ. ಆದ್ದರಿಂದ ಅವರವರಿಗೆ ರಕ್ಷಣೆ ಕೊಡಬೇಕಾದುದು ನ್ಯಾಯವಾಗಿದೆ. ಆದರೆ reservation policy arises only in cases whether there is direct recuritment and in case of promotions. Here it is neither a promotion nor a recuitment. It is only absorption. ಆದ್ದರಿಂದ ಇದರ ಬಗ್ಗೆ ಖಂಡಿತವಾಗಿ ಆಲೋಚನೆ ಮಾಡೋಣ.

ಶ್ರೀ ಟಿ. ಚೌಡಯ್ಯ.—ಸ್ವಾಮಿ ಮಾನ್ಯ ಮುಖ್ಯ ಮಂತ್ರಿಗಳು ಕಾನೂನು ಪ್ರಕಾರ ಉತ್ತರ ಕೊಟ್ಟಿದ್ದಾರೆ. ಆದರೆ ಈಗ ಕೆಲವು ಇಲಾಖೆಗಳಲ್ಲಿ ಲೋಕಲ್ ಕ್ಯಾಂಡಿಡೇಟ್ಸ್ ಮತ್ತು ದಿನಗೂಲಿಯಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ಖಾಯಂ ಮಾಡಿರುವುದರಲ್ಲಿ ನಮ್ಮದೇನು ಅಭ್ಯಂತರವಿಲ್ಲ. ಆದರೆ ಈಗ ಪ್ರತಿಯೊಂದು ಇಲಾಖೆಯಲ್ಲಿಯೂ ಕೂಡ ಹರಿಜನ ಮತ್ತು ಗಿರಿಜನರನ್ನು ಹೆಂಗಾಮಿ ನೌಕರರನ್ನಾಗಿ ಕೆಲಸಕ್ಕೆ ತೆಗೆದುಕೊಂಡು ಅವರನ್ನು ಖಾಯಂ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಈಗ ಹಂಗಾಮಿ ನೌಕರರನ್ನು ಕೆಲಸಕ್ಕೆ ತೆಗೆದು ಕೊಳ್ಳುವ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ಹೀಗಿರುವಾಗ ಅವರನ್ನು ಕೆಲಸಕ್ಕೆ ತೆಗೆದುಕೊಂಡು ಖಾಯಂ ಮಾಡಿಕೊಳ್ಳುವುದು ಹೇಗೆ ? ಆದರೂ ಸಹ ಹರಿಜನ ಮತ್ತು ಗಿರಿಜನರಿಗೆ ಸಹಾಯ ಮಾಡಬೇಕೆಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಟಿ. ಚೌಡಯ್ಯ.—ಸ್ವಾಮಿ ಮಾನ್ಯ ಮಂತ್ರಿಗಳಿಗೆ ಹರಿಜನ ಮತ್ತು ಗಿರಿಜನರ ಮೇಲೆ ಕಳಕಳಿ ಇದೆ. ಆದರೆ ತಮ್ಮ ಅಧೀನ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಈ ಒಂದು ನೀತಿಯನ್ನು ಪಾಲನೆ ಮಾಡಿಕೊಂಡು ಬರುತ್ತಿಲ್ಲವಾದ್ದರಿಂದ ತಾವು ಸಂಬಂಧಪಟ್ಟ ಎಲ್ಲಾ ಅಧೀನ ಅಧಿಕಾರಿಗಳಿಗೂ ಹರಿಜನ ಮತ್ತು ಗಿರಿಜನರಿಗೆ ಸೂಕ್ತವಾದಂತಹ ಪ್ರಾತಿನಿಧ್ಯವನ್ನು ಕೊಡಬೇಕು ಎಂದು ಒಂದು ಸುತ್ತೋಲೆಯನ್ನು ಹೊರಡಿಸಿದರೆ ಒಳ್ಳೆಯದು ಇದರಿಂದ ಹರಿಜನ ಮತ್ತು ಗಿರಿಜನರಿಗೆ ದೊರೆಯಬೇಕಾದಂತಹ ೧೫ ಪರ್ಸೆಂಟ್ ಮೀಸಲಾತಿ ದೊರೆಯುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಒಂದು ಆಜ್ಞೆಯನ್ನು ಹೊರಡಿಸುತ್ತಾರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಸಮಾಜದಲ್ಲಿ ಈ ಹರಿಜನ ಮತ್ತು ಗಿರಿಜನರ ಶೋಷಣೆ ಬಹಳ ವರ್ಷಗಳಿಂದಲೂ ನಡೆಯುತ್ತಲೇ ಬಂದಿದೆ. ಇದರಿಂದ ಅನೇಕ ಜನ ಹರಿಜನ ಮತ್ತು ಗಿರಿಜನರಿಗೆ ತೊಂದರೆಯಾಗಿದೆ. ಆದ್ದರಿಂದ ಈ ಹರಿಜನ ಮತ್ತು ಗಿರಿಜನರಿಗೆ ತೊಂದರೆಯಾಗದ ರೀತಿಯಲ್ಲಿ ಖಂಡಿತವಾಗಿ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳ ಪ್ರಕಾರ ಹರಿಜನ ಮತ್ತು ಗಿರಿಜನರ ಶೋಷಣೆಯಾಗುತ್ತಿದೆ. ಸ ಮಾರು ೧೦ ವರ್ಷಗಳಿಂದಲೂ ಈ ರೀತಿಯ ಶೋಷಣೆ ಯಾಗುತ್ತಲೇ ಇದೆ. ಆದ್ದರಿಂದ ನಾನು ಹೇಳುವುದಾದರೂ ಏನೆಂದರೆ ಹರಿಜನ ಮತ್ತು ಗಿರಿಜನರಿಗೆ ಕೊಡಬೇಕಾದಂತಹ ೧೫ ಪರ್ಸೆಂಟ್ ಮೀಸಲಾತಿಯನ್ನು ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು ಮತ್ತು ಎರಡನೆಯದಾಗಿ ವರ್ಕ್ ಚಾರ್ಜ್‌ನಲ್ಲಿ ಕೆಲಸ ಮಾಡುವುದಕ್ಕೆ ಬೇಕಾದಷ್ಟು ಜನ ಹರಿಜನ ಮತ್ತು ಗಿರಿಜನರು ಸಿಗುತ್ತಾರೆ. ಈಗ ಇರಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿ, ಲೋಕೋಪಯೋಗಿ ಇಲಾಖೆಯಲ್ಲಿ ಹೊಸ ಹೊಸ ಕೆಲಸಗಳು ಸಾಕಷ್ಟು ಪ್ರಾರಂಭವಾಗಿವೆ. ಆದ್ದರಿಂದ ಆ ಕೆಲಸಗಳಿಗೆ ಈ ಜನರನ್ನು ಸ್ಪೆಷಲ್ ಆಗಿ ರಿಕ್ರೂಟ್ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ? ಮತ್ತೆ ಈಗ ಇರುವಂತಹ ಆರ್ಡರ್‌ನ್ನು ಮಾರ್ಪಾಡು ಮಾಡಬೇಕು. ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ನಾನು ಈ ಖಾತೆಯನ್ನು ವಹಿಸಿಕೊಂಡಾಗ ನನಗೆ ಇಂತಹ ಅನ್ಯಾಯ ನಡೆದುಹೋಗಿದೆ ಎನ್ನುತಕ್ಕಂಥಾದನ್ನು ತಿಳಿದು ಬಹಳ ವ್ಯಸನವಾಯಿತು. ಏಕೆಂದರೆ ಈ ಆಜ್ಞೆ ಹೊರಡುವಾಗ ಸರ್ಕಾರದಲ್ಲಿ ಹರಿಜನರು ಮಂತ್ರಿಗಳಾಗಿದ್ದರು. ಕಣ್ಣಿಗೆ ಕಾಣುತ್ತಲೇ ಈ ಆಜ್ಞೆ ಆಗುತ್ತಿದ್ದರೆ ಅವರು ಏಕೆ ಸುಮ್ಮನಿದ್ದರೋ ಗೊತ್ತಿಲ್ಲ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನೀಯರ್ ಹುದ್ದೆಯನ್ನು ಎಕ್ಸಿಕ್ಯೂಟಿವ್ ಇಂಜಿನೀಯರ್ ಆಗಿ ಪ್ರಮೋಷನ್ ಕೊಡುವ ಅವಧಿಯನ್ನು ಐದು ವರ್ಷದಿಂದ ಮೂರು ವರ್ಷಕ್ಕೆ ಇಳಿಸಬೇಕೆಂದು ಈಗ ತೀರ್ಮಾನ ಮಾಡಿದ್ದೇವೆ. ಆದ್ದರಿಂದ

ಹಿಂದೆ ಆದಂತಹ ಅನ್ಯಾಯಗಳು ಮುಂದುವರೆಯುತ್ತಿದ್ದರೆ ಈಗಿದ್ದಂತಹ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸಾಧ್ಯವಿದ್ದರೆ ಖಂಡಿತವಾಗಿಯೂ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಗೋವಿಂದ ಒಡೆಯರಾಜ್ ಅವರು ಪ್ರಶ್ನೆ ಹಾಕಿದ ಮೇಲೆ ನನಗೆ ನೆನಪು ಬಂತು. ಈ ವರ್ಕ್ ಚಾರ್ಜ್ ಎಸ್ಟಾಬ್ಲಿಶ್‌ಮೆಂಟಿನ ೧೩ ಸಾವಿರ ಚಿಲ್ಲರೆ ಜನ ಮತ್ತು ದಿನಗೂಲಿ ಗ್ಯಾಂಗ್‌ಮನ್‌ಗಳು ೧೧ ಸಾವಿರ ಚಿಲ್ಲರೆ ಜನ ಒಟ್ಟು ೨೨–೨೩ ಸಾವಿರ ಜನರಲ್ಲಿ ಹೆಚ್ಚಿನವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿರುವಾಗ ಅವರ ಹುದ್ದೆಗಳನ್ನು ಖಾಯಂ ಗೊಳಿಸುವುದಕ್ಕೆ ನಾನು ಲೋಕೋಪಯೋಗಿ ಸಚಿವರಾಗಿದ್ದಾಗ ಒಂದು ತೀರ್ಮಾನವನ್ನು ಕೈಗೊಂಡು ಆದು ಆಜ್ಞೆ ರೂಪದಲ್ಲಿ ಹೊರಡುವುದರಲ್ಲಿತ್ತು. ಈ ಸಭೆಯಲ್ಲಿ ಹಿಂದೆ ಪಚನ ಕೊಟ್ಟಿರುವ ಪ್ರಕಾರವಾಗಿ ಈ ಆಜ್ಞೆಯನ್ನು ಜಾರಿಗೆ ತರುವಿರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀ ಬಂಗಾರಪ್ಪನವರು ಈ ಇಲಾಖೆಯ ಮಂತ್ರಿಯಾಗಿದ್ದಾಗ ಏನು ಹೇಳಿದ್ದರು ಎಂಬುದನ್ನು ನಾನು ನೋಡಿಲ್ಲ. ಯಾವ ಫೈಲನ್ನು ಬಿಟ್ಟು ಹೋಗಿದ್ದಾರೆ ಎಂಬುದನ್ನು ತರಿಸಿ ನೋಡುತ್ತೇನೆ. ಆದರೆ ಈಗ ಏನಾಗಿದೆ ಎಂದರೆ ಅಲ್ಲಿ ಒಂದು ಅನಾಹುತವಾಗಿದೆ. ಕೆಲವು ಗ್ಯಾಂಗ್‌ಮನ್ ಗುಂಪಿಗೆ ಸೇರಿದ ಕೂಲಿಕಿಲಸಗಾರರನ್ನು ಯಾವುದೇ ಸನ್ನಿವೇಶದಲ್ಲಿ ವರ್ಕ್ ಚಾರ್ಜ್ ಎಸ್ಟಾಬ್ಲಿಶ್‌ಮೆಂಟ್ ಎಂಪ್ಲಾಯಿಸ್‌ಗಳಾಗಿ ಪರಿವರ್ತಿಸಿದ್ದಾರೆ. ಕೆಲವರು ಹಾಗೆಯೇ ಉಳಿದಿದ್ದಾರೆ. ಅವರಲ್ಲಿ ಹತ್ತು ವರ್ಷ ಸರ್ವಿಸ್ ಮಾಡಿದವರನ್ನು ಐದು ವರ್ಷದಲ್ಲಿ ಖಾಯಂ ಗೊಳಿಸಬೇಕೆಂದು ೧೯೭೮ನೇ ಇಸವಿಯಲ್ಲಿ ತೀರ್ಮಾನ ಮಾಡಿದ್ದರು. ಈ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ನಾನು ಇದನ್ನು ವಿವರವಾಗಿ ಹೇಳಿದ್ದೇನೆ. ಏಕೆಂದರೆ ಕೇರಳದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು ಅವರನ್ನು ಇಂಡಸ್ಟ್ರಿಯಲ್ ಲೇಬರ್ ಎಂಬುದಾಗಿ ಮಾಡಿದರೇ ವಿನಹ ಸರ್ಕಾರಿ ನೌಕರರೆಂದು ಮಾಡಲಿಲ್ಲ. ಗ್ಯಾಂಗ್ ಕೂಲಿಗಳು ಎಷ್ಟೋ ಕಾಲದಿಂದ ಐದು ಕಿಲೋಮೀಟರ್‌ವರೆಗೆ ಒಬ್ಬರೇ ಇರಬೇಕು, ಅದೇ ಪ್ರಕಾರವಾಗಿ ಒಂದು ಸಬ್ ಡಿವಿಜನ್‌ಗೆ ಇಷ್ಟೇ ಜನ ಇಗಬೇಕು ಎಂದೆಲ್ಲಾ ಇತ್ತು. ಇದನ್ನೆಲ್ಲಾ ನಾವು ಪರಿಗಣಿಸಿ ಹೈಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ತಮಿಳುನಾಡಿನಲ್ಲಿ, ಕೇರಳದಲ್ಲಿ ಏನು ಮಾಡಿದ್ದಾರೆ ಎಂದು ವಿವರಗಳನ್ನು ತರಿಸಿ ಸೋಶಿಯಲ್ ವೆಲ್‌ಫೇರ್ ಸೆಕ್ರೆಟರಿ, ಲೇಬರ್ ಕಮೀಷನರ್, ಪಿ.ಡಬ್ಲ್ಯೂ.ಡಿ. ಸೆಕ್ರೆಟರಿ ಇನ್ನಿತರರನ್ನು ಸೇರಿಸಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಬೇರೆ ರಾಜ್ಯಗಳಲ್ಲಿ ಈ ವಿಷಯಗಳಲ್ಲಿ ಏನು ಮಾಡಿದ್ದಾರೆ ಎಂಬ ವಿವರಗಳನ್ನು ಆಧಾರವಾಗಿಟ್ಟುಕೊಂಡು ಈ ಸಮಿತಿ ಏನು ವರದಿಯನ್ನು ಕೊಡುತ್ತದೆ, ಅದರ ಮೇಲೆ ಅಂತಿಮವಾಗಿ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಕೇರಳದ ವಿಷಯ ನನಗೆ ಗೊತ್ತಿದೆ. ನಮ್ಮ ಹೈಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ಇಂಡಸ್ಟ್ರಿಯಲ್ ವರ್ಕರ್ಸ್ ಕಾನೂನಿನ ಅನ್ವಯ ಸರ್ಕಾರಿ ನೌಕರರನ್ನಾಗಿ ಮಾಡತಕ್ಕಂತಾದ್ದು ಕಷ್ಟವಾಗುತ್ತದೆಂದು ಅವರು ಹಾಗೆ ಮಾಡಿಲ್ಲ. ನನಗೆ ಗೊತ್ತಿರುವ ಹಾಗೆ ಗುಲ್ಬರ್ಗಾ ಭಾಗದವರು ನಾನು ಮಂತ್ರಿ ಪದವಿ ಬಿಟ್ಟನೇಲೆ ನನ್ನ ಪತ್ರಿರ ಬಂದು ಈ ವಿಷಯವನ್ನು ಪ್ರಸ್ತಾಪಮಾಡಿದರು. ಸರ್ಕಾರಿ ನೌಕರರನ್ನಾಗಿ ನಮ್ಮನ್ನು ಪರಿವರ್ತಿಸುವುದಾದರೆ ನಾವು ಜಡ್ಜ್‌ಮೆಂಟ್ ಪ್ರಕಾರ ಮಾಡಬೇಕು ಎಂದು ಒತ್ತಾಯ ಮಾಡುವುದಿಲ್ಲವೆಂದು ಅವರು ಹೇಳಿದ್ದರು. ನಾನು ಸಚಿವನಾಗಿದ್ದಾಗ ಕೊಟ್ಟ ಮಾತು ಏನೆಂದರೆ ಅವರನ್ನು ಸರ್ಕಾರಿ ನೌಕರರನ್ನಾಗಿ ಮಾಡುತ್ತೇನೆ ಎಂದು. ಪಿ ಡಬ್ಲ್ಯೂ.ಡಿ.ಯಲ್ಲಿ ಕಸ ಗುಡಿಸುವವರು ನಾಲ್ಕನೇ ದರ್ಜೆಯ ನೌಕರರಾಗಿದ್ದಾರೆ. ಆದ್ದರಿಂದ ಕೊನೆಯ ಪಕ್ಷ ೧೫–೨೦ ವರ್ಷಗಳಿಂದ ಅಲ್ಲಿ ಏನು ಕೆಲಸ ಮಾಡುತ್ತಿದ್ದಾರೆ, ಅವರ ಬಗ್ಗೆ ಎಲ್ಲರಿಗೂ ಅನುಕಂಪ ಇದೆ. ಆದ್ದರಿಂದ ಅವರು ಸರ್ಕಾರಿ ನೌಕರರಾಗುವುದಕ್ಕೆ ಸಿದ್ಧವಾಗಿದ್ದಾರೆ. ಅವರು ಅಡ್ಡಿ ಬರುವುದಿಲ್ಲ. ನೀವು ಸಿದ್ಧವಾಗಿದ್ದೀರಾ ? ಈ ದೃಷ್ಟಿಯಿಂದ ಫೈಲನ್ನು ತರಿಸಿ ನೋಡಿ. ಮತ್ತು ತಕ್ಷಣ ಕಾರ್ಯಕ್ರಮವನ್ನು ಜಾರಿಗೆ ತರುವಿರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಬಗ್ಗೆ ಕಾರ್ಮಿಕ ಪ್ರತಿನಿಧಿಗಳ ಜೊತೆಯಲ್ಲಿ ಈ ಹಿಂದೆ ಚರ್ಚೆ ನಡೆದಾಗ ಮಾನ್ಯ ಕಕ್ಕಿಲ್ಲಾಯ ಅವರು ಇದ್ದರು. ಹೈಕೋರ್ಟ್ ತೀರ್ಮಾನದ ಪ್ರಕಾರ ನಮಗೆ ಕೈಗಾರಿಕಾ ಕಾರ್ಮಿಕರಿಗೆ ಸಿಗತಕ್ಕಂಥ ಪ್ರಮಾಣದಲ್ಲಿ ಸೌಲಭ್ಯಗಳು ಸಿಗಬೇಕು. ಲೇಬರ್ ಕೋರ್ಟ್‌ನಲ್ಲಿ

ಟ್ರಿಬ್ಯುನಲ್‌ನಲ್ಲಿ ಅವಾರ್ಡ್ ಆಗಿದೆ. ಸರ್ಕಾರ ಹೈಕೋರ್ಟ್‌ಗೆ ಅಪೀಲ್ ಹೋಗಿತ್ತು. ಆದು ತಿರಸ್ಕೃತವಾದ ಮೇಲೆ ಟ್ರಿಬ್ಯುನಲ್ ಆ ಅವಾರ್ಡ್ ಪ್ರಕಾರ ರಸ್ತೆ ಸಾರಿಗೆ ಕೆಲಸದಲ್ಲಿ ಇರುವ ಅನೇಕ ಕಾರ್ಮಿಕರಿಗೆ ಏನು ಸವಲತ್ತು ಸಿಗಬೇಕೋ ಅದನ್ನು ಕೊಡಬೇಕಾಗುತ್ತದೆ ಎಂದು ಒತ್ತಾಯ ಮಾಡಿದ್ದಾರೆ. ಆ ರೀತಿ ಸರ್ಕಾರಿ ನೌಕರರನ್ನಾಗಿ ನೀವು ಮಾಡುವುದಾದರೆ ನಮ್ಮ ಅಫೀಲನ್ನು ಪಾಪಸ್ಸು ತೆಗೆದುಕೊಳ್ಳುತ್ತೇವೆ ಎಂಬುದನ್ನು ಅವರು ಪ್ರಸ್ತಾಪ ಮಾಡಿಲ್ಲ. ಶ್ರೀಮಾನ್ ಪಂಪಾಪತಿಯವರು ಇದನ್ನು ಹೇಳಿದ್ದಾರೆ. ಕಕ್ಕಿಲಾಯ ಅವರು ಕೂಡ ಹೇಳಿದ್ದಾರೆ. ಶ್ರೀಮಾನ್ ಕಕ್ಕಿಲಾಯ ಮತ್ತು ಪಂಪಾಪತಿಯವರು ನನ್ನನ್ನು ಭೇಟಿ ಮಾಡಿದಮೇಲೆ ಎಲ್ಲಾ ಅಧಿಕಾರಿಗಳನ್ನು ಕರೆಸಿ ತೀರ್ಮಾನ ಮಾಡಿ ಎಂದು ಲೇಬರ್ ಕಮೀಷನರ್ ಅವರಿಗೆ ಹೇಳಿದ್ದೇವೆ. ಇದರ ಬಗ್ಗೆ ಎಲ್ಲಾ ಅಧಿಕಾರಿಗಳಿಂದ ಕೂಡಿದ ಒಂದು ಸಮಿತಿಯನ್ನು ಕೂಡ ಮಾಡಿದ್ದೇವೆ. ಇನ್ನು ಹದಿನೈದು ದಿವಸ ಅಥವಾ ಒಂದು ತಿಂಗಳಲ್ಲಿ ಆದು ವರದಿಯನ್ನು ಕೊಡುತ್ತದೆ. ಆಗ ಸಮಗ್ರವಾದ ಒಂದು ತೀರ್ಮಾನವನ್ನು ಖಂಡಿತ ವಾಗಿಯೂ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇನೆ.

MR. DEPUTY SPEAKER.—Question hour is over.

QUESTIONS FOR ANSWERS ON THE DAY

(but not taken up)

Construction of Tourist Home at Nanjangud.

1125 SRI K. B. SHIVAIAH (Nanjangud).—Will the Minister for Finance and Tourism be pleased to state.—

(a) whether it has come to the notice of Government that large number of tourists are attracted to Nanjangud Town for famous pilgrimage Centre in the South.

(b) whether representations were received by Government to consider Nanjangud Town as tourist Centre and to construct a tourist home there.

(c) if so, when the Government will take the decision to construct the said tourist home?

SRI M. VEERAPPA MOILY (Minister for Finance and Tourism).—

(a) Yes.

(b) No such representations have been received.

(c) Does not arise in view of reply to Clause (b) above.

Opening of Agricultural School at Mulbagal.

1351 SRI J.M. REDDY (Mulbagal).—Will the Chief Minister be pleased to state.—

(a) whether the Government have proposed to accord sanction for opening an agricultural School at Mulbagal.

(b) if so, when it will be sanctioned?